# ಕಾರ್ಮಿಕ ನ್ಯಾಯಾಲಯ, ಮೈಸೂರು.

## **Ref**:29/2021

ಡಬ್ಲ್ಯೂ. ಡಬ್ಲ್ಯೂ-2

**ದಿನಾಂಕ 23.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀಸವಾಲುಃ 2 ನೇ ಪಕ್ಷಗಾರರ ಪರ ಶ್ರೀ.ಜೆ.ಪಿ. ರವರಿಂದ:**

ನಾನು ಈ ಮೊದಲು ಬಸವರಾಜ್ ಎಂಬ ಸೂಪ್ರವೈಸರ್ ಪರವಾಗಿ ನ್ಯಾಯಾಲಯದಲ್ಲಿ ಸಾಕ್ಷ್ಯವನ್ನು ಹೇಳಿದ್ದೆ ಎನ್ನುವುದು ನಿಜ. ಸದರಿ ಸಾಕ್ಷ್ಯದ ವಿಚಾರಣೆಯ ಸಮಯದಲ್ಲಿ ನನ್ನ ಹಾಗೂ ಬಸವರಾಜ್ ರವರ ಕೆಲಸದ ಕುರಿತು ಪ್ರಶ್ನೆಗಳನ್ನು ಮಾಡಲಾಗಿತ್ತು ಎನ್ನುವುದು ನಿಜ. ಆ ಸಮಯದಲ್ಲಿ ನಾನು ವಿಕೃತಮಾಲಾ ಕೈಗಾರಿಕಾ ಪ್ರದೇಶ ತಿರುಪತಿಯಲ್ಲಿ ಕೆಲಸ ಮಾಡುತ್ತಿದ್ದೆ ಎನ್ನುವುದು ನಿಜ.

ನಾನು 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಕೊಳ್ಳುವಾಗ ಈಗ ನೋಡುತ್ತೀರುವ ಅರ್ಜಿ ನಮೂನೆಯನ್ನು ಬರೆದುಕೊಟ್ಟಿದ್ದೆ ಎನ್ನುವುದು ನಿಜ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ನಿ.ಎಂ.1 ಎಂದು ಗುರುತಿಸಲಾಯಿತು. ನನಗೆ ತೆಲಗು ಬಾಷೆ ಮಾತನಾಡಲು ಸ್ವಲ್ಪ ಸ್ವಲ್ಪ ಬರುತ್ತದೆ. ನಾನು ಕೆಲಸವನ್ನು ಸೇರಿಕೊಂಡಿದ್ದ ಸಮಯದಲ್ಲಿ 2 ನೇ ಪಕ್ಷಗಾರರ ಸಂಸ್ಥೆಯೂ ಚೆನ್ನಾಗಿ ನಡೆಯುತ್ತಿತ್ತು. ಆದರೇ ಅದಕ್ಕೂ ಮೊದಲು ಹೇಗೆ ನಡೆಯುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನಾನು 2012 ನೇ ಸಾಲಿನಲ್ಲಿ ಕೆಲಸಕ್ಕೆ ಸೇರಿಕೊಳ್ಳುವ ಸಮಯದಲ್ಲಿ ನೇರ ಹಾಗೂ ಗುತ್ತಿಗೆ ಕಾರ್ಮಿಕರನ್ನು ಸೇರಿ ಸುಮಾರು 800 ಕ್ಕೂ ಹೆಚ್ಚು ಕಾರ್ಮಿಕರು ಕೆಲಸವನ್ನು ಮಾಡುತ್ತಿದ್ದರು. ಆ ನಂತರದಲ್ಲಿ 2 ನೇ ಪಕ್ಷಗಾರರ ಸಂಸ್ಥೆಯ ಉದ್ದಿಮೆ ಕುಂಠಿತವಾಗಿದ್ದರಿಂದ ಗುತ್ತಿಗೆ ಕಾರ್ಮಿಕರನ್ನು ಕಡಿಮೆ ಮಾಡಿಕೊಂಡು ಬಂದರು ಎನ್ನುವುದಕ್ಕೆ ಸಾಕ್ಷಿಯೂ ಉದ್ದಿಮೆ ಆದಾಯದಲ್ಲಿ ಯಾವುದೇ ತೊಂದರೆಯಾಗಿರಲಿಲ್ಲ. ಆದರೂ ಉದ್ದೇಶ ಪೂರಕವಾಗಿ ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನಾನು ಈಗ ನೋಡುತ್ತೀರುವ ದಾಖಲೆಯೂ ನೇಮಕಾತಿ ಆದೇಶ ಪತ್ರ ಇರುತ್ತದೆ. ಎನ್ನುವುದು ನಿಜ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ನಿ.ಎಂ.2 ಎಂದು ಗುರುತಿಸಲಾಯಿತು. ಸಾಕ್ಷಿ ಹೇಳುತ್ತಾರೆ. ಸದರಿ ದಾಖಲೆಯನ್ನು ನಮ್ಮ ಸಂಘ ರಚನೆಯಾದ ನಂತರ ಕೊಟ್ಟಿರುತ್ತಾರೆ. ನಮ್ಮ ಸಂಘ ರಚನೆಯಾಗುವುದಕ್ಕಿಂತ ಮೊದಲು ನೇಮಕಾತಿ ಆದೇಶ ಪತ್ರವನ್ನು ಕೊಡಲು ಆಡಳಿತ ಮಂಡಳಿಗೆ

ಕೇಳಿಕೊಂಡಿದ್ದೇವು. ಆ ಸಮಯದಲ್ಲಿ ಯಶವಂತ ಎಂಬ ಎಚ್.ಆರ್ ಮ್ಯಾನೇಜರ್ ಕೆಲಸ ಮಾಡುತ್ತಿದ್ದರು. ಆಡಳಿತ ವರ್ಗ ಮತ್ತು ಕಾರ್ಮಿಕರು ಮೌಖಿಕವಾದ ಒಪ್ಪಂದದ ಅನ್ವಯತೆಯಿಂದ ಕೆಲಸವನ್ನು ಮಾಡುತ್ತಿದ್ದೇವು ಎನ್ನುವುದು ನಿಜ. ಯಶವಂತ ರವರು ಕೆಲಸಕ್ಕೆ ಸೇರಿಕೊಳ್ಳುವುದಕ್ಕಿಂತ ಮೊದಲು ಎಚ್.ಆರ್ ವಿಭಾಗ  ಕೆಲಸ ಮಾಡುತ್ತಿರಲಿಲ್ಲ ಎನ್ನುವುದು ಸರಿಯಲ್ಲ.  ಯಶವಂತರವರು ಕೆಲಸಕ್ಕೆ ಸೇರಿದ ನಂತರ ಸದರಿ ವಿಭಾಗವನ್ನು ಚಾಲನೆಯಲ್ಲಿ ತಂದರು ಎನ್ನುವುದು ಸರಿಯಲ್ಲ.

ಖಾಯಂ ಕಾರ್ಮಿಕರ ಕೆಲಸದಲ್ಲಿ ಕಾರ್ಮಿಕರ ಸಂಖ್ಯೆ ಅಗತ್ಯಕ್ಕಿಂತ ಹೆಚ್ಚಳವಾದ್ದರಿಂದ ದಿಃ17.04.2017 ರಂದು 2 ನೇ ಪಕ್ಷಗಾರರ ಸಂಸ್ಥೆಯೂ ಸ್ವಯಂ ನಿವೃತ್ತಿ ಯೋಜನೆಯನ್ನು ತಂದಿತ್ತು ಎನ್ನುವುದು ನಿಜ. ಸಾಕಷ್ಟು ಕೆಲಸ ಇದ್ದರು ಸಹ ಕಾರ್ಮಿಕರನ್ನು ಸಂಖ್ಯೆಯನ್ನು ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ಸದರಿ ಯೋಜನೆಯನ್ನು ಕೈಗೊಂಡಿದ್ದರು ಎನ್ನುತ್ತಾರೆ. 2 ನೇ ಬಾರಿಗೆ ಸದರಿ  ಯೋಜನೆಯನ್ನು ಜಾರಿಯಲ್ಲಿ ತಂದಿತ್ತು ಎನ್ನುವುದು ನಿಜ. ಆ ಸಮಯದಲ್ಲಿ 20 ಜನ ಕಾರ್ಮಿಕರು ಸ್ವಯಂ ನಿವೃತ್ತಿ ಘೋಷನೆಯನ್ನು ಮಾಡಿಕೊಂಡರು ಎನ್ನುವುದು ನಿಜ. ಆ ನಂತರದಲ್ಲಿ ಕಾರ್ಖಾನೆಯಲ್ಲಿ ಸಾಕಷ್ಟು ಕೆಲಸ ಇಲ್ಲದೇ ಇದಿದ್ದರಿಂದ ಕಾರ್ಮಿಕರಿಗೆ ವೇತನ ಸಹಿತ ರಜೆ ಕೊಡುತ್ತಿದ್ದರು ಎನ್ನುವುದು ನಿಜ. ಆ ಸಮಯದಲ್ಲಿ ಕಾರ್ಖಾನೆಯಲ್ಲಿ ಯಾವುದೇ ಕೆಲಸಗಳು ನಡೆಯುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಕಾರ್ಖಾನೆಯಲ್ಲಿ ಕೆಲಸ ಇಲ್ಲದ ಸಮಯದಲ್ಲಿ ಕಾರ್ಮಿಕರಿಗೆ ಕೊಡುತ್ತಿದ್ದ  ಇತರೇ ಸೌಲಭ್ಯಗಳ ಖರ್ಚನ್ನು ಕಡಿಮೆ ಮಾಡುವ ಸಲುವಾಗಿ ವೇತನ ಸಹಿತ ರಜೆಯನ್ನು ಕೊಡುತ್ತಿದ್ದರು ಎನ್ನುವುದು ಸುಳ್ಳು.

ಕೇಂದ್ರ ಸರ್ಕಾರದಿಂದ 2010-2011 ನೇ ಸಾಲಿನಲ್ಲಿ 2 ನೇ ಪಕ್ಷಗಾರರ  ಆಡಳಿತ ಮಂಡಳಿಗೆ Best Employer ಎಂಬ ಪ್ರಶಸ್ತಿ ಬಂದಿತ್ತು ಎನ್ನುವುದು ನನಗೆ ಗೊತ್ತಿಲ್ಲ. 2016-17 ನೇಸಾಲಿನಲ್ಲಿ ಒಬ್ಬ ಶಶಿಕುಮಾರ್ ಮತ್ತು ಮುರಳೀಧರ್ ಪೇಶ್ವಾ ಎನ್ನುವವರು ನಮಗೆ ಸಂಘವನ್ನು ರಚನೆ ಮಾಡಿಕೊಳ್ಳಲು ಪ್ರೋತ್ಸಾಹವನ್ನು ನೀಡಿದರು ಎನ್ನುವುದು ಸುಳ್ಳು. ಆ ಸಮಯದಲ್ಲಿ ಕಾರ್ಖಾನೆಯ ಒಳಗೆ ಮತ್ತು ಹೊರಗೆ ಕೆಲವೊಂದು ಕಾರ್ಮಿಕರು ಸಂಘವನ್ನು ರಚಿಸುವ ವಿಚಾರದಲ್ಲಿ ಗಲಾಟೆಗಳನ್ನು ಮಾಡಲು ಪ್ರಾರಂಭಿಸಿದೇವು ಎನ್ನುವುದು ಸುಳ್ಳು. ಕಾರ್ಮಿಕರಲ್ಲಿ ಕೆಲವೊಂದು ಕಾರ್ಮಿಕರು ಸಂಘ ರಚನೆಗೆ ಪ್ರತಿರೋಧ ಮಾಡಿ ತಮ್ಮದೇ ಆದ Welfare Association ನ್ನು ಮಾಡಿಕೊಂಡರು ಎನ್ನುವುದು ನಿಜ. ಆದರೇ ಸಂಘ ರಚನೆಯಾದ ನಂತರ ಆಡಳಿತ  ಮಂಡಳಿಯ ಉದ್ದೇಶದಿಂದ ರಚನೆ ಮಾಡಿಕೊಂಡರು. ಆಡಳಿತ

ಮಂಡಳಿಯವರು ಸದರಿ Welfare Association ನಲ್ಲಿ ಸದಸ್ಯತ್ವವನ್ನು ಹೊಂದಿರುವುದಿಲ್ಲ. ಆಡಳಿತ ಮಂಡಳಿಯೂ ಸದರಿ Welfare Association ನ್ನು ರಚನೆ ಮಾಡಲು ಸಹಾಯ ಮಾಡಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ Welfare Association ನ್ನು ರಚನೆ ಮಾಡಿಕೊಂಡ ಕಾರ್ಮಿಕರಿಗೆ ನಮ್ಮ ಸಂಘದ ಕಾರ್ಯ ಚಟುವಟಿಕೆಗಳು ಒಪ್ಪಿಗೆ ಆಗದೇ ಇದ್ದ ಕಾರಣಕ್ಕೆ ಸದರಿ Welfare Association ರಚನೆ ಮಾಡಿಕೊಂಡರು ಎನ್ನುವುದು ಸರಿಯಲ್ಲ. Welfare Association ನ್ನು ರಚನೆ ಮಾಡಲು ಉದ್ದೇಶ ಇರಲಿಲ್ಲ ಎನ್ನುವುದು ಸರಿಯಲ್ಲ.

ಆ ನಂತರದಲ್ಲಿ Welfare Association ನ ಕಾರ್ಮಿಕರು ಕೆಲಸವನ್ನು ಮುಂದುವರೆಸಿದ್ದು, ನಮ್ಮ ಸಂಘದ ಸದಸ್ಯ ಕಾರ್ಮಿಕರುಗಳು ಕೆಲಸಕ್ಕೆ ಹಾಜರಾಗದೇ ಪ್ರತಿಭಟನೆಗಳನ್ನು ಮಾಡುತ್ತಿದ್ದೇವು ಎನ್ನುವುದು ಸರಿಯಲ್ಲ. ಆ ಕಾರಣಕ್ಕೆ ದಿಃ20.03.2018 ರಂದು 2 ನೇ ಪಕ್ಷಗಾರರ ಸಂಸ್ಥೆಯೂ ನಮಗೆ ಎಚ್ಚರಿಕೆ ನೋಟೀಸ್ ನ್ನು ಕೊಟ್ಟಿದ್ದರು ಎನ್ನುವುದು ನಿಜ. ಆದರೇ ಉದ್ದೇಶ ಪೂರಕವಾಗಿ ಕೊಟ್ಟಿದ್ದರು. ಆಡಳಿತ ಮಂಡಳಿಯೂ ಎಲ್ಲ ಕಾರ್ಮಿಕರಿಗೆ ಕೆಲಸವನ್ನು ಶ್ರದ್ದೆ, ಪ್ರಾಮಾಣಿಕ, ಶಾಂತಿಯಿಂದ ಮತ್ತು ಸೌಹಾರ್ದತೆಯಿಂದ ಮಾಡಿ ಎಂದು ಮನವಿಯನ್ನು ನೋಟೀಸ್ ಬೋರ್ಡ್ ಪ್ರಕಟಿಸುವುದರ ಮೂಲಕ ಮಾಡಿಕೊಳ್ಳುತ್ತಿತ್ತು ಎನ್ನುವುದು ಸುಳ್ಳು.

ಈ ಸಮಯದಲ್ಲಿ ಶ್ರೀ.ಜೆ.ಪಿ ಅವರು ಸಾಕ್ಷಿಯ ಮುಂದಿನ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಆಲಿಸಿ ಮುಂದುಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

Sd/-

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**